ಓ ಎಸ್ ನಂ.120/2022, ಪಿಡಬ್ಲ್ಯೂ -2

ದಿನಾಂಕಃ 17-07-2025

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನ್ಯಾಯಾಲಯಕ್ಕೆ ನನನ್ನು ವಾದಿಯರು ಕರೆ ತಂದಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದೆ. ಬಸವಂತೆಪ್ಪ ವಾದಿ ದೊಡ್ಡಬಸಪ್ಪ ಪ್ರತಿವಾದಿಯ ಮೇಲೆ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ವಾದಿ ಜಮೀನು ತನ್ನ ಹೆಸರಿಗೆ ಅಗಬೇಕು ಎಂದು ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ಬಸಪ್ಪನನ್ನು ನಾನು ನೋಡಿರುತ್ತೇನೆ. ಈ ಪ್ರಕರಣದ ದಾವಾ ಆಸ್ತಿಯ ಸರ್ವೆ ನಂ. 17 ಅಗಿರುತ್ತದೆ. ಸದರಿ ಅಸ್ತಿಯನ್ನು ಬಸಪ್ಪ ಇವರ ಹೆಸರಿಗೆ ಸರ್ಕಾರ ಮಂಜೂರು ಮಾಡಿತ್ತು ಎಂದರೆ ಸರಿ. ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಅಸ್ತಿಗಳು ವಾದಿ ಮತ್ತು ಪ್ರತಿವಾದಿಗಳಿಗೆ ಇವೆ ಎಂದರೆ ಸರಿ. ಬಸವಂತೆಪ್ಪ ಮತ್ತು ಬಸಪ್ಪ ಇವರ ಕುಟುಂಬಗಳು ಪ್ರತ್ಯೇಕಗೊಂಡು ಬಹಳ ವರ್ಷಗಳಾಗಿರುತ್ತವೆ ಎಂದರೆ ಸರಿ. ಅದೇ ರೀತಿ ಜಮೀನುಗಳಲ್ಲಿಯೂ ಸಹ ಪಾಲು ಮಾಡಿಕೊಂಡು ಸಾಕಷ್ಟು ವರ್ಷಗಳು ಕಳೆದಿರುತ್ತವೆ ಎಂದರೆ ಸರಿ. ದಾವಾ ಆಸ್ತಿ ಪಿತ್ರಾರ್ಜಿತ ಅಸ್ತಿಎಂದು ನಾನು ಪ್ರಮಾಣ ಪತ್ರದಲ್ಲಿ ಹೇಳಿಸಿ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯದ ಬಗ್ಗೆ ಮಾಹಿತಿ ಇರುವುದಿಲ್ಲ ಅದರೂ ಕೂಡ ವಾದಿಯ ಬಸವಂತೆಪ್ಪರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಇಂದು ದಿನಾಂಕಃ **17-07-2025** ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಕೊಪ್ಪಳ.